3575 (4317) – ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಂಪತಿ ಜೋಡಗೆ ವರ್ಗಾವಣೆ ಬಗ್ಗೆ ಒಬ್ಬರು ಸರ್ಕಾರಿ ನೌಕರಿಯಲ್ಲಿದ್ದು ಇನ್ನೊಬ್ಬರು ಖಾಸಗಿ ಉದ್ಯೋಗದಲ್ಲಿದ್ದರೆ ಏಕೆ ಪರಿಗಣಿಸಲಾಗುತ್ತಿಲ್ಲ ;

ಆ) ಇದರಿಂದ ಅಂತಹ ನೌಕರರು ತೀರ ತೊಂದರೆ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಸರ್ಕಾರದ ಗಮನಕ್ಕೆ ಬಂದಿದ್ದರೆ ಆ ಬಗ್ಗೆ ಅಗತ್ಯ ಕ್ರಮಕೈಗೊಳ್ಳಲಾಗುವುದೆ ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) –

ಅ) ಪತಿ–ಪತ್ನಿಯರಿಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಖಾಲಿ ಹುದ್ದೆಗಳಿರುವ ಸ್ಥಳವನ್ನು ಪರಿಗಣಿಸುವ ಅವರಲ್ಲಿ ಯಾರಾದರೊಬ್ಬರನ್ನು ಇನ್ನೊಬ್ಬರಿರುವ ಜಾಗಕ್ಕೆ ವರ್ಗಾಯಿಸಬಹುದು. ಆದರೆ ಇಬ್ಬರಲ್ಲಿ ಒಬ್ಬರು ಖಾಸಗಿ ಉದ್ಯೋಗದಲ್ಲಿದ್ದರೆ ಖಾಸಗಿ ಉದ್ಯೋಗವಿರುವ ಜಾಗಕ್ಕೆ ಸರ್ಕಾರಿ ನೌಕರರನ್ನು ವರ್ಗಾಯಿಸುವುದನ್ನು ಬಿಟ್ಟು ಬೇರೆ ಪರ್ಯಾಯವಿರುವುದಿಲ್ಲ. ಖಾಸಗಿ ಉದ್ಯೋಗಿ ನಿವೃತ್ತನಾಗುವವರೆಗೆ ಒಂದೇ ಜಾಗದಲ್ಲಿದ್ದರೆ, ಸರ್ಕಾರಿ ನೌಕರರನ್ನು ಯಾವುದೇ ವರ್ಗಾವಗೆಯಿಲ್ಲದೆ ಅಲ್ಲಿಯೇ ಮುಂದುವರೆಸುವ ಪ್ರಮೇಯ ಬರುತ್ತದೆ. ಆದ್ದರಿಂದ ದಿನಾಂಕ:22.11.2001 ರ ಆದೇಶದಲ್ಲಿ ಪ್ರಕಟಿಸಲಾದ ವರ್ಗಾವಗಾ ನೀತಿಯಲ್ಲಿ ಪತಿ–ಪತ್ನಿಯರಿಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಮಾತ್ರ ಸಾಧ್ಯವಾದಷ್ಟು ಮಟ್ಟಿಗೆ ಅವರು ಒಂದೆಡೆ ಕಾರ್ಯ ನಿರ್ವಹಿಸಲನುವಾಗುವಂತೆ ವರ್ಗಾವಣೆ ಮಾಡಲು ಅವಕಾಶವನ್ನು ಕಲ್ಪಿಸಲಾಗಿದೆ.

3576 (4318) ಶ್ರೀ ಮೋಹನ್ ಕೃಷ್ಣ ಶೆಟ್ಟಿ (ಕುಮಟ)– ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಮಟಾ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬಹಳಷ್ಟು ವಸತಿ ರಹಿತ ಕಡುಬಡ ಮೀನುಗಾರಿಕಾ ಕುಟುಂಬಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಇವರಿಗೆ ಹೆಚ್ಚಿನ ಸಂಖ್ಯೆಯ ಮತ್ಸ್ಯ ಆಶ್ರಯ ಮನೆಗಳನ್ನು ನೀಡುವ ಬಗ್ಗೆ ಸರ್ಕಾರ ಮನಗಂಡಿದೆಯೇ ;

ಇ) ಮನಗಂಡಿದ್ದರೆ, ಹೆಚ್ಚಿನ ಮತ್ಸ್ಯ ಆಶ್ರಯ ಮನೆಗಳನ್ನು ನೀಡಲಾಗುವುದೇ?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)–

ಅ)ಹೌದು.

ಆ) ಹೌದು.

ಇ) ಪ್ರಸಕ್ತ ಸಾಲಿನಲ್ಲಿ ಮತ್ಸ್ಯಾಶ್ರಯ ಯೋಜನೆಯಡಿ ಮನೆಗಳನ್ನು ಅರ್ಹ ಮೀನುಗಾರರಿಗೆ ಮಂಜೂರು ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

3577 (4047) ಶ್ರೀ ನಾಗರಾಜಶೆಟ್ಟಿ ಬಿ. (ಬಂಟ್ವಾಳ) – ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ದೊಡ್ಡ ಪ್ರಮಾಣದ ಹಾಗೂ ಸಣ್ಣ ಪ್ರಮಾಣದ ಅಣೆಕಟ್ಟೆಗಳ್ಯಾವುವು;

ಆ) ಇವುಗಳ ಸುರಕ್ಷತತೆಯ ಬಗ್ಗೆ ಸರ್ಕಾರ ನಿಗಾ ವಹಿಸಿದೆಯೇ; ಯಾವ ರೀತಿಯ ಸುರಕ್ಷತೆಯ ಆತಂಕ ಉಂಟಾಗಿದೆ ; (ಭದ್ರತೆ ವಿಚಾರ ಬಿಟ್ಟು);

ಇ) ಸದರಿ ಅಣೆಕಟ್ಟುಗಳಿಗೆ ಭೂಕಂಪದ ಅಪಾಯಗಳಿರುವುದು ಸಂಶೋಧನೆಗಳಿಂದ ಕಂಡು ಬಂದಿದೆಯೇ; ಈ ಮೊದಲು ಇಂತಹ ಅಪಾಯ ತಲೆದೋರಿತ್ತೇ ;

ಈ) ಕೊಯ್ನಾದಂತೆಯೇ ರಾಜ್ಯ ದಲ್ಲಿ ಯಾವ ಯಾವ ಅಣೆಕಟ್ಟುಗಳಿಗೆ ಈ ಅಪಾಯದ ಆತಂಕವಿದೆ, ಈ ಭೂಕಂಪದ ತೀವ್ರತೆಯ ಪ್ರಮಾಣ ಎಷ್ಟು (ವಿವರ ನೀಡುವುದು) ;